ಮೈಸೂರ ಗೆಜೆಟ್.

ನಂ. 10. ಸರ್ಕಾರದಿಂದ ಫಾಯಿಷ್ ಆದ್ದು. ಸ್ 1877.

ಬೆಂಗಳೂರು, ಶನಿವಾರ, ಮಾರ್ಚೀ ತಾ॥ 10, ಸ್ 1877.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ವ ಕೊಡಗು ಶೀವೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ಮೆಂಟಿನವರ ಇಸ್ತಿಹಾರ್ ನಾಮೆಗಳು. .. .. ಪುಟ 47—50

2ನೇ ಭಾಗ–ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಿಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್‌ಟಿಂಡೆಂಟರು, ಡೆಪ್ಯೂಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇ ವ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಫಾರೆಸ್ಟ್ ಕನಸರ್‌ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯೂಟಿ ಕಮ್ಮಿಷನರುಗಳು, ಪೋಲೀಸ್ ಸೂಪರ್‌ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟ್ಸುಗಳು; ಪೋಸ್ಟಾಫಿಸ್ ನೋಟಿಸ್‌ಗಳು. 137—153

3ನೇ ಭಾಗ–ಇಂಡ್ಯ ಗವರ್ಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟುಗಳು.

4ನೇ ಭಾಗ–ಬೆಲ್ಲರೆ ವಿಷಯಗಳ ಕಾಗದ ಪತ್ರಗಳು.—

ಸಪ್ಲಿಮೆಂಟ್—ಖುಲಾಸೇಯಾದ ಖೈದಿಗಳ ಚಹರೆಪಟ್ಟಿ. ..

1ನೇ ಭಾಗ.

ಮೈಸೂರು ಚೀವ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್ ನಾಮೆ.

ನಂ, 407 ತಾರೀಖು 1ನೇ ಮಾರ್ಚೀ 1877.

ಸ್ 1876ನೇ ಇಸವಿ ನವೆಂಬರ್ 4ನೇ ಮತ್ತುಂ ಮೈಸೂರು ಗೆಜಿಟ್‌ನಲ್ಲಿ ಫಾಯಿಷ್‌ಮಾಡಲ್ಪಟ್ಟ ಅದೇಸಾಲ್ ಮಾಷೇ 2ನೇ ಮತ್ತುಂ 268ನೇ ನಂಬರ್ ಚೀಫ್‌ಕಮ್ಮಿಷನ್ನರಸಾಹೇಬರವರ ಇಸ್ತಿಹಾರಿನಲ್ಲಿ, (1)ನೇ ನಗರ ಅಪ್ಪಗ್ರಾಮ ಡಿವೀರ್ಜಗಳ ಮುನ್ನಾಡು ತಾಲ್ಲೂಕುಗಳಲ್ಲಿ ವಿನಾ ಇತರ ತಾಲ್ಲೂಕುಗಳಲ್ಲಿ ಜಮ್ಮಿ ಕಂದಾಯದ ಖಿಸ್ತುಗಳು 4ರಿಂದ 7ರ ವರಿಗೂ ಬಡಾಯಿಸಲ್ಪಟ್ಟು ಆಖೈರು ಖಿಸ್ತು ಬರುವ ಜ್ಞಾ ತಿಂಗಳಲ್ಲಿ ಪಾವತಿ ಮಾಡಲ್ಪಡೇಕೆಂತಲೂ, (2)ನೇ ಈ ಸಾಲಿಗೆ ಜಮ್ಮಿ ಕಂದಾಯ ವಗೈರೆಗಳ ಬಾಕೀಮೇಲೆ ಬಡ್ಡೀ ವಸೂಲ್ಮಾಡಲ್ಪಡುವದಿಲ್ಲವೆಂತಲೂ, (3)ನೇ ಡಿವಿಜ್ ಕಮ್ಮಿಷನ್ನರಿಯವರ ಇಸ್ತಿಹಾರ್ ಮೂಲಕ ಮುಖ್ಯವಾಗಿ ತಪ್ಪಿಸಲ್ಪಡುವ ತಾಲ್ಲೂಕುಗಳಲ್ಲಿ ಯಾ ತಾಲ್ಲೂಕುಗಳ ಪ್ರದೇಶಗಳಲ್ಲಿ ಹುಲ್ಲು ಬನ್ನಿ ಹರಾಜುನಡಿಸಲ್ಪಡುವದಿಲ್ಲವೆಂತಲೂ, ಪ್ರಸಿದ ಮಾಡಲ್ಪಟ್ಟತು.

2. ಈ ಎರಡು ಸಂವತ್ಸರಗಳಲ್ಲಿ ಅನೇಕ ಡಿಸ್ಟ್ರಿಕ್ಟುಗಳೊಳಗೆ ಬೆಳೆಗಳು ನಷ್ಟವಾಗಿ ಅದರಿಂದ ಸಂಭವಿಸಿದ ಪ್ರಬಲವಾದ ಲುಕ್ಸಾನಿಗೆ ನಿಗೆಕೊಟ್ಟು ಚೀಫ್ ಕಮ್ಮಿಷನ್ನರ್‌ಸಾಹೆಬರವರು, ಈ ಕೆಳಗೆ ನಮೂದಾಗುವ ಮೇರೆ ಮಾಡಲ್ಪಟ್ಟ ಜಾಸ್ತಿ ರಿಯಾಯತ್‌ಗಳನ್ನು ತಿಳಿಯಪಡಿಸುತ್ತಾರೆ.

1. ಸಾಧಾರಣ ಸಾಗುವಳಿ ಕಾಲದೊಳಗೆ ನೀರು ಬಾರದ ಕೆರೆಗಳ ಕೆಳಗೆ ಇರುವ ಹೊಸ ಜಮೀನುಗಳಿಗೆ, ಮಾರ್ಚಿ, ಏಪ್ರಿಲ್, ಮೇ, ಮತ್ತು ಜೂನ್ ಪಿಸ್ತುಗಳನ್ನು, ಅರ್ಧ ಕಂದಾಯ ಸೋಡಿ ಕೊಡತಕ್ಕ ಬಗ್ಗೆ ಡಿಸ್ಟ್ರಿಕ್ಟ್ ಆಫಿಸರಿಗೆಗೆ ಅಧಿಕಾರ ಕೊಡಲ್ಪಟ್ಟಿರುತ್ತೆ. ಆದರೆ ಈ ರಿಯಾಯತ್ತಿ, ಕೆಲವು ಬೆಳೆ ಮಾಡಿಕೊಳ್ಳತಕ್ಕ ಬಗ್ಗೆ ವಸತಿ ವುಳ್ಳವರೆ ಜಮೀನ್‌ದಾರ್ರುಗಳಿಗೆ ತೋರಿಸಲ್ಪಡಲಿಕ್ಕೆ ಪ್ರಸ್ತಾಪಿಸಲ್ಪಟ್ಟಿರುವಲ್ಲ. ಮತ್ತು ಜಮಾಬಂದಿ ಮಾಡುವ ಆಫೀಸರರು, ಈ ಹುಕ್ಕುಂ ಲಗಾವಿ ಮಾಡತಕ್ಕದ್ದು ಅಯುಕ್ತವೆಂದು ಸಂಗತಿಗಳಿಂದ ಯಾವಾಗ ತಮಿಗೆ ಕಾಣಬರುತ್ತೋ ಆಗ ಸದರೀ ರಿಯಾಯತ್‌ನ್ನು ತೋರಿಸದೇ ಬಿಡಲಿಕ್ಕೆ ಅವರಿಗೆ ಯುಕ್ತವಾಗಿರತಕ್ಕದ್ದು.

2. ನಾಲೆಗಳ ಮತ್ತು ಬಾವಡಿಗಳ ಕೆಳಗೆ ಇರುವ ಜಮೀನುಗಳು ನೀರು ಇಲ್ಲದೆ ಹೋದ್ದರಿಂದ ಉಭಯ ಸಾಗುವಳಿ ಕಾಲದಲ್ಲಿಯು ಸಾಗುವಳಿ ಆಗಲಿಕ್ಕೆ ಯಾವ ರೀತಾವೂ ಇಲ್ಲದೆ ಇದ್ದಲ್ಲಿ, ಕಮ್ಮಿಷನ್ನರವರ ಹುಕ್ಕುಂ ಅನುಸರಿಸಿ, ಮುಖ್ಯವಾಗಿ, ಅರ್ಧಕಂದಾಯ ಸೋಡಿಮಾಡಲ್ಪಡಬಹುದು.

3. ಬೆಳೆ ಇಲ್ಲದೆ ಹೋಗಿ ಬಹಳವಾಗಿ ಲುಕ್ಸಾನಟ್ಟ ತಾಲ್ಲೂಕುಗಳಲ್ಲಿ ಯಾ ಹೋಬಳಿಗಳಲ್ಲಿರುವ ಖುಷ್ಕಿ ಜಮೀನುಗಳ ವಿಷಯದಲ್ಲಿ, ಯಾವ ರೈತರು ತಾವು ಕೊಡತಕ್ಕ ಜಮೀನು ಕಂದಾಯ ಮೇರೆ 35 ರೂಪಾಯಿಗಳಾಗಿಯೂ ಅದಕ್ಕೆ ಕಮ್ಮಿಯಾಗಿಯೂ ಇರುತ್ತೋ ಅಂತಾ ರೈತರಿಗೆ ಜಾಲತಿ ಇಸವಿ ತೆರಿಗೆ ಯು, ಕಡೇ 3 ಕಿಸ್ತುಗಳ ಹಣವನ್ನು ಪೂರಾ ಸೋಡಿ ಮಾಡತಕ್ಕ ಬಗ್ಗೆ ಡಿಪ್ಯುಟಿ ಕಮ್ಮಿಷನ್ನರ್‌ಗಳಿಗೆ ಅಧಿಕಾರ ಕೊಡಲ್ಪಟ್ಟಿರುತ್ತೆ. ಮತ್ತು ಸದರೀ ಮೊಬಲಗಿಂತ ಕಲೂ ಹೆಚ್ಚು ಕಂದಾಯ ಕಟ್ಟುವ ಸಂಗತಿಗಳಲ್ಲಿ ಎರಡು ಪಿಸ್ತುಗಳು ಪೂರಾ ಸೋಡಿ ಮಾಡಲ್ಪಡಬಹುದು. ಸದರೀ ಉಭಯ ಸಂಗತಿಗಳೊಳಗೂ, ಮುಂದಿನ ಸಾಲಿನಲ್ಲಿ ವಸೂಲ್ಮಾಡಲ್ಪಡತಕ್ಕ ಬಗ್ಗೆ, ಬಂದು ಜಾಸ್ತಿ ಪಿಸ್ತನ್ನು ನಿಲ್ಲಿಸುವಂತೆ ಡಿಪ್ಯುಟಿ ಕಮ್ಮಿಷನ್ನರವರು ಹುಕ್ಕುಂ ಮಾಡಬಹುದು. ಆದರೆ ಹಾಂಗೆ ನಿಲ್ಲಿಸಬೇಕಾದ್ದು ಖಂಡಿತವಾಗಿ ಅವಶ್ಯಕವೆಂದು ಎಣಿಸಲ್ಪಟ್ಟಕ್ಕೇನೇ ಹುಕ್ಕುಂ ಮಾಡಬಹುದು.

4. ಈ ಇಸ್ತಿಹಾರ್ ಮುಖ್ಯವಾಗಿ ಎಲ್ಲಿಗೆ ಸಂಬಂಧಪಡುತ್ತೋ ಅಂತಾ ಪ್ರದೇಶಗಳಲ್ಲಿ ಸದರೀ ಇಸ್ತಿಹಾರ್ ಪೂರಾ ಪ್ರಸಿದ್ಧ ಪಡಿಸಲ್ಪಡತಕ್ಕದ್ದೆಂದು ಚೀಫ್ ಕಮ್ಮಿಷನ್ನರ್‌ಸಾಹೆಬರು ಆಜ್ಞೆಕೊಡಿಸುತ್ತಾರೆ.

ನಂ. 408 ತಾರೀಖು 26ನೇ ಫಿಬ್ರವರೀ 1877.

ಸ್ಯ 1870ನೇ ಇಸವಿ 10ನೇ ನಂಬರ್ ಲ್ಯಾಂಡ್ ಅಕ್ವಿಜೇಷನ್ ಆಕ್ಟಿನ 6ನೇ ಪ್ರಕರಣ ನಿಬಂಧನೆಗಳನುಸರಿಸಿ ಇದರಿಂದ ತಿಳಿಸಲ್ಪಡುವದೇನಂದರೆ ಲಷ್ಕರ್ ಮೊಹಲ್ಲಾ ಕಾಕಿ ಫೈಲ್ವಾನ್ ಬೀದಿಯಿಂದ ದೊಡ್ಡ ಕೆರೆಹೋಗುವ ರಸ್ತೆಯ ರುಂದಿಯನ್ನು ಬಡಾಯಿಸುವಬಗ್ಗೆ ಈ ಕೆಳಗಿನ ತಖ್ತೆಯಲ್ಲಿ ನಮೂದ್ಮಾಡಲ್ಪಟ್ಟಿರುವ ಮನೆಯು ಜಮೀನು ಸದಾ ಮೈಸೂರು ಮ್ಯುನಿಸಿಪಾಲಿಟಿಯವರಿಗೆ ಪ್ರಕಾಗಿರುತ್ತೆ.

ನಂ.	ಮೊಹಲ್ಲಾ	ಮೂಲೀಕನ ಹೆಸರು	ಜಮೀನ ತಪೇಲ್	ಬೀಜವರಿ ಲಾಂಬ	ಬೀಜವರಿ ರುಂದಿ	ಬೀಜವರಿ ಉಂಚಿ	ಪರಿಮಾಣ	ಕಂದಾಯ	ಚೌತರ್ಫ
1	ಲಷ್ಕರ್ ಮೊಹಲ್ಲಾ	ಮಲೇಕಗಿರಿ ಗೌಡರು	ಖಾಲಿಜಮೀನು 1ನೇ ರಬಂ	68	49	..	3332	ಈ ಹೊಸ ರಸ್ತೆಯಿಂದ ಮುನಿಸಿಪಾಲಿಟಿಗೆ ಬರತಕ್ಕ ಕಂದಾಯ ಯಾವದಿಲ್ಲ	ಉತ್ತರಕ್ಕೆ ಸರಕಾರ ರಸ್ತೆ ಪೂರ್ವಕ್ಕೆ ಸರಕಾರ ರಸ್ತೆ ದಕ್ಷಿಣಕ್ಕೆ ಮುನಿಸಿಪಾಲಿಟಿಗೆ ಸೇರಿದ ಖಾಲಿ ಜಮೀನು ಪಶ್ಚಿಮಕ್ಕೆ ಪೂರ್ಣೈಯ್ಯನವರ ನಾಲಾ
			2ನೇ ಡಿಟೋ	116	61	..	7076		
			3ನೇ ಡಿಟೋ	67	8	..	536		
							10944 ಅಳತೆಗಳು ಅಥವಾ 1216 ಸಲಗ ಜಗೆಳು		
			ಪೆಂಚಿನ ವಿರಾಡಾ	12ಲಂಕಣಗಳು					

119

224.

ನಂ. 418. ತಾರೀಖು 7ನೇ ಮಾರ್ಚಿ 1877.

ಇದರಿಂದ ಸರ್ವರಿಗೂ ತಿಳಿಯಪಡಿಸುವ ದೇನಂದರೆ—ನಂದಿದುರ್ಗ ಡಿವಿಜ್ಞನಲ್ಲಿ ತಂಗಡಿ ಚಕ್ಕೆಯ ತೀರ್ವೆಯು 1877ನೇ ಇಸವಿ ಯೇಪ್ರಲ್ ಗುರ್ತೀ ಲಗಾಯಿತು ಚಕಡಾಭಂಡಿ ಭೋಜೆವೊಂದಕ್ಕೆ 5 ರೂಪಾಯಿ ನಿಂದ 8 ರೂಪಾಯಿಗೆ ಭಡಾಯಿಸಲ್ಪಡುವದು.

ನಂ. 420. ತಾರೀಖು 2ನೇ ಮಾರ್ಚಿ 1877.

ಕೊಲಾರ ಡಿಸ್ಟ್ರಿಕ್ಟು ಬೇತಮಂಗಲ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಕಸ್ತೂರಿರಂಗಾಚಾರ್ರಿಗೆ ಇದರಡಿ ನಮೂದಿಸಲ್ಪಡುವ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

ಸನ 1854ನೇ ಇಸವಿ 18ನೇ ನಂಬರ್ ಮತ್ತು 1871ನೇ ಇಸವಿ 25ನೇ ನಂಬರ್ ರೇಲ್ವೆ ಆಕ್ಟ್ಗಳಿಗೆ ವಿರೋಧವಾಗಿ ಮಾಡಲ್ಪಡುವ ಮತ್ತು ತಮ್ಮ ಅಧಿಕಾರಕ್ಕೆ ಬಳಪಟ್ಟು ಜುರ್ಮಾನೇ ಮೂಲಕ್ಕ ಮಾತ್ರವೇ ದಂಡಿಸಲ್ಪಡತಕ್ಕ ತಕಸೀರುಗಳನ್ನು ದರಿಯಾಪ್ತಿ ಮಾಡಲಿಕ್ಕೂ ಫೈಸಲ್ಮಾಡಲಿಕ್ಕೂ ಅಧಿಕಾರ.

2. ಪರಿಷ್ಕರಿಸಲ್ಪಟ್ಟ ಫಾರೆಸ್ಟು ರೂಲ್ಸ್ 37ನೇ ಸೆಕ್ಷರ್ಗೆ ವಿರೋಧವಾಗಿ ಮಾಡಲ್ಪಡುವ ಮತ್ತು ತಮ್ಮ ಅಧಿಕಾರಕ್ಕೆ ಬಳಪಟ್ಟ ತಕಸೀರುಗಳನ್ನು ದರಿಯಾಪ್ತಿ ಮಾಡತಕ್ಕ ಅಧಿಕಾರ.

ನಂ. 421. ತಾರೀಖು 5ನೇ ಮಾರ್ಚಿ 1877.

6ನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನ್ನರ್ ಮೆಸ್ಟರ್ ನರಸಿಂಗರಾಯರು ಇನಾಂ ಇಲಾಖೆಗೆ 1877ನೇ ಇಸವಿ ಫಿಬ್ರವರಿ 12ನೇ ಮುಕ್ಕಂ ಮಧ್ಯಾನ್ಹಕ್ಕೆ ಪೂರ್ವ ದಾಖಲಾದರು.

ನಂ. 422. ತಾರೀಖು 6ನೇ ಮಾರ್ಚಿ 1877.

ಮೈಸೂರು ರೆವಿನ್ಯೂ ಸರ್ವೇ ಅಸಿಸ್ಟೆಂಟ್ ಸೂಪರ್ಟಿಂಡೆಂಟ್ರಾದ ಲೆಪ್ಟೆನೆಂಟ್ ಮೆಸಿಂಟ್ಯೈರ್ರಯವರು ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಮೆಸ್ಟರ್ ಜೆತಂಯವರು ತುಮಕೂರು ಡಿಸ್ಟ್ರಿಕ್ಟ್ನಲ್ಲಿ, ಸ್ಪೆಷಲ್ಡ್ಯೂಟಿ ಬಗ್ಗೆ ನಗರ ಪ ನಂದೀದುರ್ಗ ಡಿವೀರ್ಜ ಕಮಿಷನ್ನರ್ಗಳ ತಾಬೇಯಲ್ಲಿ ಹಂಗಾಮಿಯಾಗಿ ಇಡಲ್ಪಟ್ಟಿರುತ್ತಾರೆ.

ನಂ. 423. ತಾರೀಖು 6ನೇ ಮಾರ್ಚಿ 1877.

ನಂದೀದುರ್ಗ ವ ಅಷ್ಟಗ್ರಾಮ ಡಿವೀರ್ಜಗಳಿಂದ ಪರಿಕ್ಷೆ ಬಗ್ಗೆ ಬಂದ ಇದರಡಿ ನಮೂದಿಸಲ್ಪಡುವ ಉದ್ಯೋಗಸ್ಥರು ಅವರವರ ಹೆಸರುಗಳ ಬಳೀ ತಿಳಿಸಲ್ಪಟ್ಟಿರುವ ಪರಿಕ್ಷೆಗಳನ್ನು ಕೊಟ್ಟು ತೇರ್ಗಡೆಯಾಗಿದ್ದಾರೆ.

ನಂದೀದುರ್ಗ ಡಿವೀರ್ಜ.

ರ್ಯಾಂಕ್ ಪ್ರಕಾರ ಸಂಖ್ಯೆ.

1. ಗೋರೀಬಿದನೂರು ತಾಲ್ಲೂಕು ಪ್ರೊವಿನೇರಿ ಅಮಲ್ದಾರ್ ರಾಮಾನುಜ್ಯಯ್ಯಂಗಾರ್ ಅಮದಾರ್ ಪರಿಕ್ಷೆ.
2. ರಾಮಸ್ವಾಮಯ್ಯಂಗಾರ್—ತುಮಕೂರು ಡಿಸ್ಟ್ರಿಕ್ಟು ಜುಡಿಯಲ್ ಶಿರಸ್ತೇದಾರ್ ಅಮಲ್ದಾರ್ ಪರಿಕ್ಷೆ.
3. ಗೋವಾಲರಾವ್—ನಂದೀದುರ್ಗ ಡಿವೀರ್ಜ ಆಫೀಸ್ ಫರ್ಸ್ಟ್ ಅಕೌಂಟೆಂಟ್ ಅಮಲ್ದಾರ್ ಪರಿಕ್ಷೆ.
4. ಸೀತಾರಾಮಯ್ಯ—ಕೋಲಾರ ಡಿಸ್ಟ್ರಿಕ್ಟು ಟ್ರೆಜರೀ ಜಡ್ ಅಕೌಂಟೆಂಟ್ ಅಮದಾರ್ ಪರಿಕ್ಷೆ.
1. ರಾಘವಾಚಾರ್ರು—ಬೆಂಗಳೂರು ಡಿಸ್ಟ್ರಿಕ್ಟು 2ನೇ ಕ್ಲಾಸ್ ಇನ್ಸ್ಪೆಕ್ಟರ್ ಅಮಲ್ದಾರ್ ಪರಿಕ್ಷೆ ಪೈಕಿ ಜುಡಿಯಲ್ ಭಾಗ.
2. ವೇದಾಚಲಪಿಳ್ಳೆ—ತುಮಕೂರು ಡಿಸ್ಟ್ರಿಕ್ಟು ಇನ್ಸ್ಪೆಕ್ಟರ್ ಅಮಲ್ದಾರ್ ಪರಿಕ್ಷೆ ಪೈಕಿ ಜುಡಿಯಲ್ ಭಾಗ.
3. ವೆಂಕಟಾಚಾರ್—ಕೋಲಾರ್ ಡಿಸ್ಟ್ರಿಕ್ಟು ಇನ್ಸ್ಪೆಕ್ಟರ್ ಅಮಲ್ದಾರ್ ಪರಿಕ್ಷೆ ಪೈಕಿ ಜುಡಿಯಲ್ ಭಾಗ.
4. ಕೃಷ್ಣಪ್ಪಂಗ್—ತುಮಕೂರು ಡಿಸ್ಟ್ರಿಕ್ಟು ಸಬ್ ಇನ್ಸ್ಪೆಕ್ಟರ್ ಅಮಲ್ದಾರ್ ಪರಿಕ್ಷೆ ಪೈಕಿ ಜುಡಿಯಲ್ ಭಾಗ.

ಅಪ್ಪ್ಟಗ್ಯಾಮು ಡಿವೀರ್ಜ.

1. ವೆಂಕಟಾಚಾರ್—ಅಮಲ್ದಾರ್ ಪರಿಕ್ಷೆ
2. ಷೇಕ್ ಇಬ್ರಾಯಿಂ.—ಡಿಟೋ

1. ಗೋವಿಂದರಾಜಲುನಾಯಿಡು—ಅಮಲ್ದಾರ್ ಪರಿಕ್ಷೆ ಪೈಕಿ ಜುಡಿಯಲ್ ಭಾಗ.
2. ಶ್ರೀಕಂಠೈಯ್ಯ—ಡಿಟೋ

ನಂ. 425. ತಾರೀಖು 7ನೇ ಮಾರ್ಚೀ 1877.

ಮೆಸ್ಟರ್ ಬಿ. ಶ್ರೀನಿವಾಸೈಯ್ಯಂಗಾರ್ರವರು ತುಮಕೂರು ಡಿಸ್ಟ್ರಿಕ್ಟ್ ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟು ಚಾರ್ಜನ್ನು ಮೆಸ್ಟರ್ ರಾಮೈಯ್ಯನಾಯಿಡು ಯವರಿಂದ 1877ನೇ ಫಿಬ್ರವರಿ 27ನೇ ಮರ್ತ್ಯಂ ಮಧ್ಯಾನ್ಹಕ್ಕೆ ಪೂರ್ವ ತೆಗದುಕೊಂಡರು.

ನಂ. 426. ತಾರೀಖು 8ನೇ ಮಾರ್ಚೀ 1877.

ತುಮಕೂರು ಡಿಸ್ಟ್ರಿಕ್ಟ್ ಜುಡಿಷಿಯಲ್ ಅಸಿಸ್ಟೆಂಟ್ ಕಮಿಷನರ್ ಮೆಸ್ಟರ್ ಬಿ. ಶ್ರೀನಿವಾಸೈಯ್ಯಂಗಾರ್ರಿಗೆ, 1872ನೇ ಇಸವೀ 10ನೇ ನಂಬರ್ ಆಕ್ಟ್ ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡ್ 19ನೇ ಸೆಕ್ಷನ್ ಅರ್ಥ ಅನುಸರಿಸಿ ಫಸ್ಟ್ ಕ್ಲಾಸ್ ಮೆಜಸ್ಟ್ರೇಟ್ ಅಧಿಕಾರಗಳೂ ಅದೇ ಆಕ್ಟು 27 (*a*) ಸೆಕ್ಷನ್ 1ರಿಂದ 5ರ ವರಿಗಿನ ಕ್ಲಾಜ್‌ಗಳಲ್ಲಿ ನಮೂದಾಗಿರುವ ಜಾಸ್ತೀ ಅಧಿಕಾರಗಳೂ, ಹಂಗಾಮಿ ಯೆಪ್ಪಾಡು ತರೀಕ್, ಕೊಡಲ್ಪಟ್ಟಿವೆ.

2. ಯಿದರಡಿ ನಮೂದಿಸಲ್ಪಡುವ ಉದ್ಯೋಗಸ್ಥರಿಗೆ 1872ನೇ ಇಸವೀ 10ನೇ ನಂಬರ್ ಆಕ್ಟು ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 19ನೇ ಸೆಕ್ಷನ್ ಅರ್ಥ ರೀತ್ಯಾ 3ನೇ ಕ್ಲಾಸ್ ಮಾಜಿಸ್ಟ್ರೇಟಿ ಅಧಿಕಾರಗಳೂ ಅದೇ ಆಕ್ಟು 23 (*a*) ಸೆಕ್ಷನ್ 1—2ನೇ ಕ್ಲಾಜ್‌ಗಳಲ್ಲಿ ನಮೂದಾಗಿರುವ ಜಾಸ್ತೀ ಅಧಿಕಾರಗಳೂ, ಹಂಗಾಮಿ ಯೆಪ್ಪಾಡು ತರೀಕ್, ಕೊಡಲ್ಪಟ್ಟಿವೆ, ಮತ್ತು ಸದರೀ ಅಧಿಕಾರಗಳನ್ನು ಚಲಾಯಿಸುವಲ್ಲಿ ಫಿರ್ಯಾದಿಗಳ ಯಾ ಸಾಕ್ಷಿಗಳ ಸಾಕ್ಷ್ಯವನ್ನು ಕನ್ನಡ ಭಾಷೇಯಲ್ಲಿ ಸ್ವತಃ ತೆಗದುಕೊಳ್ಳಲಿಕ್ಕೆ ಐರ್ಜ ಆಕ್ಟು 335ನೇ ಸೆಕ್ಷನ್ ಅನುಸರಿಸಿ ಅಪ್ಪಣೆ ಸಹಾ ಕೊಡಲ್ಪಟ್ಟಿರುತ್ತೆ.

ನಂದೀದುರ್ಗ ಡಿವೀರ್ಜ.

1. ಗಂಗಾಧರೈಯ—ಜೇತಮಂಗಲ ತಾಲ್ಲೂಕು ಶಿರಸ್ತೇದಾರ್.
2. ಶ್ರೀನಿವಾಸೈಯ್ಯಂಗಾರ್—ಗುಡಿಬಂಡೆ ತಾಲ್ಲೂಕು ಶಿರಸ್ತೇದಾರ್.
3. ಥೊಂಡುರಾವ್—ಬಿಡ್ಲಫಟ್ಟ ತಾಲ್ಲೂಕು ಶಿರಸ್ತೇದಾರ್.

ಅಪ್ಪ್ಟಗ್ಯಾಮು ಡಿವೀರ್ಜ.

4. ಮಹಮದ್ ಅಲ್ಲಿಖಾನ್—ಶ್ರೀರಂಗಪಟ್ಣದ ಪೇಷ್ಕಾರ್.
5. ರಾಮರಾವ್—ಚಾಮರಾಜನಗರ ಪೇಷ್ಕಾರ್.

ನಂ. 427. ತಾರೀಖು 8ನೇ ಮಾರ್ಚೀ 1877.

ಮೈಸೂರು ಜುಡಿಷಿಯಲ್ ಅಸಿಸ್ಟೆಂಟ್ ಕೋರ್ಟು ನಾಯಬ್ ಶಿರಸ್ತೇದಾರ್ ತಿರುಮಲಾಚಾರ್ರು ಮದ್ದೂರು ತಾಲ್ಲೂಕು ಸಬ್ ಡಿವೀರ್ಜ ಪೇಷ್ಕಾರಿ ಕೆಲಸವನ್ನು ನೋಡುತಿರುವಲ್ಲಿ ಅವರಿಗೆ 3ನೇ ಕ್ಲಾಸ್ ಮೇಜಿಸ್ಟ್ರೇಟ್ ಅಧಿಕಾರಗಳನ್ನು ಹಂಗಾಮಿ ಯೇರ್ಪಾಡು ತರೀಕ್ ಕೊಡಲ್ಪಟ್ಟಿರುತ್ತೆ.

"ಬಮೋಜೇಬ್ ಹುಕ್ಕುಂ,"

T. CLARKE,
Offg. Secretary.